## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 548/2021

**ಸಾಕ್ಷಿಯನ್ನು ದಿಃ 22.12.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | |
|---|---|---|
| ಹೆಸರು | ಆರ್. ರಮೇಶ | ಪಿಡಬ್ಲ್ಯೂ:3 |
| ತಂದೆಯ ಹೆಸರು | ಲೇಟ್ ರಾಮಶೆಟ್ಟಿ | |
| ವಯಸ್ಸು | 56 ವರ್ಷ | |
| ಉದ್ಯೋಗ | ಎ.ಎಸ್.ಐ ಹುಣಸೂರು ಪಟ್ಟಣ ಪೊಲೀಸ್ ಠಾಣೆ | |
| ವಾಸಸ್ಥಳ | ಕೆ.ಆರ್ ನಗರ. | |

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 299 ರಡಿ ಸಾಕ್ಷಿ ವಿಚಾರಣೆ**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ದಿಃ 28.07.2022 ರಿಂದ ಹುಣಸೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಕೇಸಿನ ಲ್ಲಿ ಆರೋಪಿಯ ಮೇಲೆ ನ್ಯಾಯಾಲಯ ಉದ್ಘೋಷಣೆ ವಾರೆಂಟ್ ಅನ್ನು ಹೊರಡಿಸಿದ್ದನ್ನು ದಿಃ 20.07.2025 ರಂದು ಸ್ವೀಕರಿಸಿರುತ್ತೇನೆ. ಅದರಲ್ಲಿ ದಿಃ 28.07.2025 ರಂದು ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಕಿರಿಜಾಜಿ ಗ್ರಾಮದಲ್ಲಿ ವಾದ ಇದ್ದ ಆರೋಪಿ ಮಹೇಶ್ ಬಿನ್ ಬಸವರಾಜಪ್ಪ ರವರ ಮನೆ ಮುಂಭಾಗ ಪಂಚಾಯಿತಿದಾರರಾದ ನವೀನ್ ಮತ್ತು ಕೃಷ್ಣಮೂರ್ತಿ ಮತ್ತು ಶ್ರೀನಿವಾಸ ರವರ ಸಮಕ್ಷಮ ನ್ಯಾಯಾಲಯದ ಸಿಸಿ ನಂ. 548/2021 ರಲ್ಲಿ ಆರೋಪಿ ಮಹೇಶ್ ಬಿನ್ ಬಸವರಾಜಪ್ಪ ರವರಿಗೆ ಉದ್ಘೋಷಣೆಯನ್ನು ಹೊರಡಿಸಿದ್ದು, ಸದರಿ ಆರೋಪಿಯು ಮೂರ್ಚೆ ರೋಗ

ಮತ್ತು ಬುದ್ದಿ ಭ್ರಮಣೆ ಕಾಯಿಲೆ ಇದ್ದು ಈಗ್ಗೆ 6 ತಿಂಗಳ ಹಿಂದೆ ಮನೆ ಬಿಟ್ಟು ಹೋದರವರು ಎಲ್ಲಿಗೆ ಹೋಗಿರುತ್ತಾರೆ ಎಂದು ಗೊತ್ತಿಲ್ಲ, ಮನೆ ಬೀಗ ಹಾಕಿ ಖಾಲಿ ಬಿದ್ದಿದೆ ಎಂದು ಗ್ರಾಮಸ್ಥರು ಮತ್ತು ಪಂಚಾಯಿತದಾರರು ತಿಳಿಸಿರುತ್ತಾರೆ .

ಸದರಿ ಆರೋಪಿ ಪತ್ತೆ ಆದಲ್ಲಿ ದಿಃ 08.09.2025 ರಂದು ನ್ಯಾಯಾಲಯದ ಮುಂದೆ ಹಾಜರಾಗಬೇಕೆಂದು ಪಂಚಾಯಿತಿದಾರರಾಲ್ಲಿ ಉದ್ಘೋಷಣೆಯ ವಾರೆಂಟ್ ಅನ್ನು ಆರೋಪಿ ಮಹೇಶ್ ಬಿನ್ ಬಸವರಾಜಪ್ಪ ರವರು ವಾಸ ಇದ್ದ ಮನೆಗೆ ಅಂಟಿಸಲಾಯಿತು, ಇನ್ನೊಂದು ಪ್ರತಿಯನ್ನು ಮೂಕನಹಳ್ಳಿ ಗ್ರಾಮ ಪಂಚಾಯಿತಿ, ರಾಮಪಟ್ಟಣ ಕಛೇರಿಯ ನೊಟೀಸು ಬೋರ್ಡ ಅಲ್ಲಿ ಅಂಟಿಸಲಾಯಿತು, ನಂತರ ಕಿರಿಜಾಜಿ ಗ್ರಾಮದಲ್ಲಿ ಟಾಂ ಟಾಂ ರೀತಿಯಲ್ಲಿ ಉದ್ಘೋಷಣೆಯನ್ನು ಏರು ಧ್ವನಿಯಲ್ಲಿ ಸಾರಿ ಸಾರಿ ಹೇಳಲಾಯಿತು. ಮತ್ತೊಂದು ಪ್ರತಿಯನ್ನು ನ್ಯಾಯಾಲಯದ ನೊಟೀಸು ಬೋರ್ಡ್ ಅಲ್ಲಿ ಅಂಟಿಸಿ ಉದ್ಘೋಷಣೆಯನ್ನು ಕಾರ್ಯಗತಗೊಳಿಸಲಾಯಿತು.

ಬೆಳಿಗ್ಗೆ 10 ರಿಂದ 11 ಗಂಟೆ ವರೆಗೆ ಮಹಜರ್ ಜರುಗಿಸಿರುತ್ತೇನೆ. ಸದರಿ ಮಹಜರ್ ಅನ್ನು ನಿಪಿ.3 ಎಂದು, ಸಾಕ್ಷಿಯ ಸಹಿಯನ್ನು 3 (ಎ) ಎಂದು, ಪಂಚರಾದ ನವೀನ್ ಮತ್ತು ಕೃಷ್ಣಮೂರ್ತಿ ಸಹಿಗಳನ್ನು ಕ್ರಮವಾಗಿ ನಿಪಿ.3(ಬಿ ಮತ್ತು ಸಿ ) ಎಂದು ಗುರುತಿಸಲಾಯಿತು. ಉದ್ಘೋಷಣಾ ಸಮಯದಲ್ಲಿ ಎರಡು ಪೋಟೊಗಳನ್ನು ಮೊಬೈಲ್ ನಲ್ಲಿ ತೆಗೆದಿದ್ದು, ಪ್ರಿಂಟ್ ತೆಗೆದ 2 ಪೋಟೊಗಳನ್ನು ನಿಪಿ. 4 ಮತ್ತು 5 ಎಂದು ಗುರುತಿಸಲಾಯಿತು.

ಆರೋಪಿತ ಮಹೇಶ್ ರವರ ಹೆಸರಿನಲ್ಲಿ ಸ್ಥಿರಾಸ್ಥಿ ಇರುವ ಬಗ್ಗೆ ಅಟ್ಯಾಚ್ ಮೆಂಟ್ ವಾರೆಂಟ್ ಹೊರಡಿಸಿದ್ದು, ಮೂಕನಹಳ್ಳಿ ಗ್ರಾಮ ಪಂಚಾಯಿತಿ, ರಾಮಪಟ್ಟಣ ಕಛೇರಿಗೆ ಮನವಿ ಕೊಟ್ಟು, ವರದಿಯನ್ನು ಪಡೆದು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ವರದಿಯಲ್ಲಿ ಆರೋಪಿತನ ಹೆಸರಿನಲ್ಲಿ

ಯಾವುದೆ ಸ್ಥಿರ ಮತ್ತು ಚರಾಸ್ಥಿ ಇರುವುದಿಲ್ಲವೆಂದು ವರದಿ ನೀಡಿರುತ್ತಾರೆ . ಸದರಿ ವರದಿಯನ್ನು ನಿಪಿ. 6 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃಆರೋಪಿ ತಲೆ ಮರಿಸಿಕೊಂಡಿರುತ್ತಾನೆ.**

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.